# ಪುಸ್ತಕ ಪರಿಚಯ



**_Hinduism—The Eternal Dharma_**

**ಲೇಖಕರು : ಸ್ವಾಮಿ ಮುಖ್ಯಾನಂದ**

**ಪ್ರಕಾಶಕರು : ಗ್ರಂಥಕರ್ತರು, ರಾಮಕೃಷ್ಣ ಮಠ,**
**ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ 711202**

**ಪ್ರತಿಗಳು ದೊರಕುವ ವಿಳಾಸ : ಅದ್ವೈತ ಆಶ್ರಮ, ನಂ. 5,**
**ಡೆಹಿ ಎಂಟಲಿ ರೋಡ್, ಕೊಲ್‌ಕಟ-700014**
**ಮತ್ತು ಶ್ರೀರಾಮಕೃಷ್ಣ ಆಶ್ರಮ, ಮೈಸೂರು**

**ಪುಟಗಳು : 181 ಬೆಲೆ : 100/-ರೂ.ಗಳು**

ಶ್ರೀಮತ್ ಸ್ವಾಮಿ ಮುಖ್ಯಾನಂದಜಿ ಅವರು ಹಿಂದೂಧರ್ಮ ಮತ್ತು ಸಮಾಜದ ಕುರಿತಾಗಿ ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದು ವಿಖ್ಯಾತರಾಗಿದ್ದಾರೆ. ಅವರು ಸನಾತನ ಹಿಂದೂ ಧರ್ಮದ ಕುರಿತಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಈ ಪುಸ್ತಕವು ಅವರ ಕೃತಿಗಳಲ್ಲಿ ಗಣನೀಯವಾದುದಾಗಿದೆ.

ಎಂದೂ ನಶಿಸದ, ಎಲ್ಲ ಕಾಲಕ್ಕೂ ಪ್ರಯೋಗಸಾಧ್ಯವೂ, ಪ್ರಸ್ತುತವೂ ಎಂದಾಗಿರುವ ಸನಾತನ ಹಿಂದೂಧರ್ಮವು ಕಾಲಕಾಲಕ್ಕೆ ಸರಿಯಾಗಿ ಅವತಾರ ಪುರುಷರು, ಆಚಾರ್ಯ ಸ್ವಾಮಿಗಳು, ಸಂತ ಮಹಾತ್ಮರು—ಇವರ ಮೂಲಕ ಅಭಿವ್ಯಕ್ತಗೊಂಡು ಬೆಳಗುತ್ತಾ ಬಂದಿದೆ. ಸನಾತನ ಹಿಂದೂಧರ್ಮವು ದೇವರು, ಜಗತ್ತು, ಜೀವ, ಜೀವನ, ಮರಣ ಇತ್ಯಾದಿ ಮಾನವನ ಮೂಲಭೂತವಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ನೀಡಬಲ್ಲುದಾಗಿದ್ದು ವಿಭಿನ್ನ ಮನೋವಿಕಾಸ-ಜೀವನಪರಿಸ್ಥಿತಿಯ ಜನಕೋಟಿಗೆ ರಚನಾತ್ಮಕವೂ ಪ್ರಯೋಗಸಾಧ್ಯವೂ ಆದ ಜೀವನ ಸೂತ್ರಗಳನ್ನು ನೀಡಿರುತ್ತದೆ. ಇದು ಹಿಂದೂಧರ್ಮದ ವೈಶಿಷ್ಟ್ಯವಾಗಿದೆ. ಹಾಗಾಗಿ ಅದು ವಿಶ್ವ ಮಾನ್ಯ ಧರ್ಮ ಎಂದು ವಿಖ್ಯಾತವಾಗಿದೆ. ಇಂತಹ ಮಹತ್ವ ಪೂರ್ಣವಾದ ಹಿಂದೂಧರ್ಮದ ಕುರಿತಾಗಿ ಈ ಆಂಗ್ಲ ಗ್ರಂಥವು ಸರಳವೂ ಸೂಕ್ಷ್ಮವೂ ಆದ ವಿವರಣೆಯನ್ನು ಒಳಗೊಂಡಿರುತ್ತದೆ.

ಭೂಮಿಕೆಯಲ್ಲಿ ಹಿಂದೂಧರ್ಮದ ಹೆಸರು,ವಿವಿಧ ಮುಖಗಳ ಪ್ರಸ್ತಾಪದ ನಂತರ ಗ್ರಂಥದಲ್ಲಿ ಶ್ರುತಿ ಮತ್ತು ಸ್ಮೃತಿ ಎಂಬ ಎರಡು ಭಾಗಗಳನ್ನು ಕಾಣುತ್ತೇವೆ. ಮೊದಲ ಭಾಗದಲ್ಲಿ ಬ್ರಹ್ಮ, ಬ್ರಹ್ಮಾಂಡ, ಕರ್ಮ,ಸಂಸಾರ,ಈಶ್ವರ, ಅವತಾರ, ಯೋಗ ಇತ್ಯಾದಿ ವಿಚಾರಗಳನ್ನು ಕುರಿತು ಬರೆಯಲಾಗಿದೆ. ಸ್ಮೃತಿ ಭಾಗದಲ್ಲಿ ಧರ್ಮ, ಚತುರ್ವಿಧ ಪುರುಷಾರ್ಥಗಳು, ವರ್ಣಾಶ್ರಮ ಧರ್ಮ, ಸ್ವಧರ್ಮ, ಸಾಮಾನ್ಯಧರ್ಮ, ಕರ್ಮ ಮತ್ತು ಸಂಸ್ಕಾರಗಳ ಬಗ್ಗೆ ಬಣ್ಣನೆ ಇದೆ. ಕಡೆಯ ಭಾಗವು ಅನುಬಂಧದ ಭಾಗವಾಗಿದೆ. ಈ ಭಾಗದಲ್ಲಿ ಧರ್ಮದ ಕುರಿತಾಗಿ ಪಾಶ್ಚಾತ್ಯರ ಪರಿಕಲ್ಪನೆ, ನ್ಯಾಯ-ಸಾಂಖ್ಯ-ವೇದಾಂತ-ಇತಿಹಾಸ-ಪುರಾಣಗಳು-ಆಗಮ-ಮಂತ್ರಗಳು ಎಂಬೀ ವಿಚಾರಗಳ ಬಗೆಗೆ ಪಕ್ಷಿನೋಟವಿದೆ. ಈ ವಿಭಾಗದಲ್ಲಿ ವರ್ಣಾಶ್ರಮವು ಹೇಗೆ ಬೆಳೆದು ಬಂತು, ಆಧುನಿಕ ಕಾಲದಲ್ಲಿ ಹಿಂದೂ ಸಮಾಜವು ಎಂತಹ ಪರಿಸ್ಥಿತಿಯಲ್ಲಿ ನಿಂತಿದೆ, ವರ್ಣಾಶ್ರಮದ ಸಾಧಕ-ಬಾಧಕಗಳು ಇತ್ಯಾದಿಯಾಗಿ ಚಿಂತನಯೋಗ್ಯವಾದ ಉಲ್ಲೇಖವಿದೆ. ಸ್ವಾಮಿಗಳು ವರ್ಣಾಶ್ರಮ ಧರ್ಮವನ್ನು ಇಂದಿನ ಕಾಲಕ್ಕೆ ಸರಿಯಾಗಿ ಹೇಗೆ ಪರಿಷ್ಕರಿಸಬಹುದು ಎಂದು ಸೂಚಿಸುತ್ತಾ ವರ್ಣದ ಶ್ರೇಣಿಯಲ್ಲಿ ಕೆಳಗಿನವರು ಮೇಲಿನ ಹಾಗೂ ಉನ್ನತ ಶ್ರೇಣಿಗೆ ತಲುಪಲು ಬಾಳಿನಲ್ಲಿ ಯತ್ನಿಸಬೇಕು ಎಂದು ಹೇಳಿ ಹಾಗೆ ತಲಪುವುದನ್ನು ವರ್ಣೋತ್ಕರ್ಷ ಎಂದು ಕರೆದಿರುತ್ತಾರೆ. ಹಾಗೆಯೇ ವರ್ಣಧರ್ಮದ ಬದಲಿಗೆ ವೃತ್ತಿಧರ್ಮವು ಈ ಕಾಲಕ್ಕೆ ಸೂಕ್ತ ಎಂಬುದಾಗಿ ಪ್ರತಿಪಾದಿಸಿರುತ್ತಾರೆ. ಅಸ್ಪೃಶ್ಯತೆಯು ಹಿಂದೂ ಸಮಾಜದ ಬಹುದೊಡ್ಡ ಕೊರತೆ-ದುರಂತ ಎಂಬುದನ್ನು ಪುಷ್ಟೀಕರಿಸುತ್ತಾ ಸಮಸ್ಯೆಯ ನಿವಾರಣೆಗೆ ಹಿಂದುಳಿದ ವರ್ಗದವರನ್ನು ಶುದ್ಧೀಕರಿಸಿ "ದ್ವಿಜೀಕರಣ" ಮಾಡುವುದು ಪರಿಣಾಮಕಾರಿಯಾದ ಪರಿಹಾರೋಪಾಯ ಎಂಬುದಾಗಿ ಸ್ವಾಮೀಜಿಯವರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಹಿಂದೂಧರ್ಮದ ಮುಖ್ಯವಾದ ತತ್ತ್ವವಿಚಾರಗಳ ಕುರಿತಾಗಿ ಆಸಕ್ತರಿಗೆ ನೆನಪಿಡಲು ಅನುಕೂಲವಾಗುವಂತೆ ಸೂತ್ರಗಳನ್ನು ರೂಪಿಸಲಾಗಿದ್ದು ಅವುಗಳನ್ನು ದಶಸೂತ್ರಗಳು ಎಂಬುದಾಗಿ ಹೆಸರಿಸಿ ಬಣ್ಣಿಸಲಾಗಿದೆ. ಪುಸ್ತಕದ ಉದ್ದಕ್ಕೂ ಗ್ರಂಥಕರ್ತರು ಹಿಂದೂ ಧರ್ಮದ ಪ್ರಾಚೀನತೆ, ಅಳಿವಿಲ್ಲದ ಸತ್ವ, ವಿಶಿಷ್ಟತೆಯ ಬಗೆಗೆ ಒತ್ತು ನೀಡುತ್ತಾ ಆಧುನಿಕ ಕಾಲದಲ್ಲಿ ಜೀವನ ಪರಿಸ್ಥಿತಿಗೆ ಹಿಂದೂ ಧರ್ಮದ ಆಚಾರ-ವಿಚಾರಗಳನ್ನು ಸೂಕ್ತವಾದ ಪರಿಷ್ಕಾರದೊಂದಿಗೆ ಹೊಂದಿಸಬಹುದು ಎಂಬುದರ ಬಗೆಗೆ ಚಿಂತನೆಯನ್ನು ಅದ್ವೈತ ವೇದಾಂತದ ಹಿನ್ನೆಲೆಯೊಡನೆ ಮನಗಾಣಿಸುವ ರೀತಿಯಲ್ಲಿ ಮಂಡಿಸಿರುತ್ತಾರೆ. ಹಿಂದೂಧರ್ಮದ ಶಾಸ್ತ್ರಗ್ರಂಥಗಳು, ತತ್ತ್ವವಿಚಾರಗಳು, ವರ್ಣಾಶ್ರಮಧರ್ಮ, ವೃತ್ತಿಧರ್ಮ, ವೃತ್ತಿಸ್ವರೂಪ, ಆರ್ಯ-ದ್ರಾವಿಡ ವಿಚಾರಗಳು ಇತ್ಯಾದಿ ಅಂಶಗಳ ಸಂಬಂಧವಾಗಿ ವಿವರವಾದ ತಖ್ತೆಗಳು, ಕಿರುಪ್ರಬಂಧಗಳು ಪುಸ್ತಕದ ಅನುಬಂಧ ಭಾಗದಲ್ಲಿ ಸಂಪನ್ನವಾಗಿವೆ.

ಹಿಂದೂಧರ್ಮದ ಬಗೆಗಿನ ವಿವರವಾದ ತಿಳಿವಳಿಕೆ, ವಿವಿಧ ದರ್ಶನಗಳ ಸಿದ್ಧಾಂತದ ವಿಚಾರಮಂಡನೆ–ಸಮಾಲೋಚನೆ, ಕರ್ಮ, ಭಕ್ತಿ, ಜ್ಞಾನ ಮೊದಲಾದ ಯೋಗವಿಚಾರ, ಸಾಧನಾ ವಿವರಗಳು, ಧಾರ್ಮಿಕ ಪರಂಪರೆ, ಆಚಾರ್ಯ ಸ್ವಾಮಿಗಳು, ಸಂತಮಹಾಪುರುಷರು—ಇವರ ಸಂದೇಶ, ಮಠ-ಮಂದಿರಗಳ ಪಾತ್ರ ಇತ್ಯಾದಿಯಾಗಿ ಹಿಂದೂಧರ್ಮದ ಎಲ್ಲ ವಿಚಾರಗಳ ಉಲ್ಲೇಖ, ಮಾರ್ಗದರ್ಶನ ಈ ಪುಸ್ತಕದಲ್ಲಿ ಇರುವುದಿಲ್ಲ. ಹಾಗಾಗಿ ಇದನ್ನು ಸಹಜವಾಗಿ ಹಿಂದೂ ಧರ್ಮದ ಸಮಗ್ರಮಾಹಿತಿಯ ಕೈಪಿಡಿ ಅಥವಾ ಪ್ರದೀಪ ಎಂದು ಪರಿಗಣಿಸುವಂತಿಲ್ಲ. ಹಾಗಿದ್ದರೂ ಕೂಡ ಹಿಂದೂಧರ್ಮದ ತತ್ತ್ವ-ಸಂದೇಶಗಳು, ಸಾಮಾಜಿಕ ಸಮಸ್ಯೆ-ಸವಾಲುಗಳ ಬಗೆಗೆ ಪ್ರಾಮಾಣಿಕವೂ ರಚನಾತ್ಮಕವೂ ಆದ ವಿಶ್ಲೇಷಣೆ- ವಿಚಾರ ಮಂಡನೆಯೊಡನೆ ನವ ಚಿಂತನೆ – ಸೂಚನೆಗಳನ್ನು ಈ ಕೃತಿಯು ಒಳಗೊಂಡಿರುವುದರಿಂದ ಇದು ಹಿಂದೂಧರ್ಮಾಸಕ್ತರು, ಅಭಿಮಾನಿಗಳು ಅಗತ್ಯವಾಗಿ ಓದಬೇಕಾದ ಒಳ್ಳೆಯ ಉಪಯುಕ್ತ ಪುಸ್ತಕ ಆಗಿರುತ್ತದೆ.

**— ಎದುರ್ಕಳ ಕೆ.ಶಂಕರನಾರಾಯಣ ಭಟ್**